ವಿಷಯ :– ಗಡಿ ಪ್ರದೇಶ ಅಭಿವೃದ್ಧಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 528 (1093)

ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಡಿ ಪ್ರದೇಶ ಅಭಿವೃದ್ಧಿ ಅನುದಾನದಲ್ಲಿ ನಿಪ್ಪಾಣಿ ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಮಂಜೂರು ಮಾಡಿರುವ ಹಣ ಎಷ್ಟು ?

ಆ) ಈ ಕಾರ್ಯಕ್ರಮದಲ್ಲಿ ಸೇರಿಸಿರುವ ರಸ್ತೆಗಳು ಎಷ್ಟು ?

ಇ) ಕಾಮಗಾರಿಗಳನ್ನು ಎಂದು ಪ್ರಾರಂಭ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಹಣವನ್ನು ಇದುವರೆವಿಗೂ ಮಂಜೂರು ಮಾಡಿರುವುದಿಲ್ಲ.

ಆ) ನಿಪ್ಪಾಣಿ ವಿಧಾನಸಭಾ ಕ್ಷೇತ್ರದಲ್ಲಿ ಗಡಿ ಪ್ರದೇಶ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಕೆಳಕಂಡ ಮೂರು ರಸ್ತೆಗಳನ್ನು ಸೇರಿಸಲಾಗಿದೆ.

ಅ) ನೆಜ್ ಕ್ರಾಸ್‌ನಿಂದ ಇಂಚಲ್–ಕೊರಂಜಿ ಗಡಿ 5 ಕಿ. ಮೀ.

ಆ) ಮಕ್ಕೆ–ಕುರಂದವಾಡ ರಸ್ತೆ 5 ಕಿ. ಮೀ. ಉದ್ದ.

ಇ) ಮುಧೋಳ–ನಿಪ್ಪಾಣಿ ರಸ್ತೆ 5 ಕಿ. ಮೀ.

ಇ) ಸೂಕ್ತ ಅನುದಾನವನ್ನು ನಿಗದಿ ಪಡಿಸಿದ ಮೇಲೆ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು.

ವಿಷಯ :– ನಿಪ್ಪಾಣಿ ಕ್ಷೇತ್ರದ ಎ. ಪಿ. ಎಂ. ಸಿ. ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 529 (1092)

ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿಪ್ಪಾಣಿ ಕ್ಷೇತ್ರದಲ್ಲಿ ಎ. ಪಿ. ಎಂ. ಸಿ. ಹಣದಿಂದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕೆ ಮಂಜೂರು ಮಾಡಿರುವ ಹಣವೆಷ್ಟು ?

ಆ) ಈ ಕಾರ್ಯಕ್ರಮದಲ್ಲಿ ಸೇರಿರುವ ರಸ್ತೆಗಳು ಎಷ್ಟು ?

ಇ) ಈ ಕಾಮಗಾರಿಗಳನ್ನು ಎಂದು ಪ್ರಾರಂಭ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಇದುವರೆವಿಗೂ ಹಣ ಮಂಜೂರು ಮಾಡಿರುವುದಿಲ್ಲ.

ಆ) ನಿಪ್ಪಾಣಿ ಕ್ಷೇತ್ರದ ವ್ಯಾಪ್ತಿಯಲ್ಲಿ 9 ರಸ್ತೆಗಳನ್ನು ಹಾಗೂ 8 ಸೇತುವೆಗಳನ್ನು ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.)

ಇ) ಸೂಕ್ತ ಅನುದಾನವನ್ನು ನಿಗದಿಪಡಿಸಿದ ಮೇಲೆ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು.

ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎ.ಪಿ.ಎಂ.ಸಿ. ಅನುದಾನದಲ್ಲಿ ಅಭಿವೃದ್ಧಿ ಪಡಿಸಲು ಪ್ರಸ್ತಾಪಿಸಿರುವ ರಸ್ತೆಗಳ ವಿವರ

ಕ್ರ.ಸಂ.	ರಸ್ತೆಯ ಕಾಮಗಾರಿಗಳ ವಿವರ	ರಸ್ತೆಯ ದರ್ಜೆ	ರಸ್ತೆಯ ಒಟ್ಟು ಉದ್ದ
1	2	3	4
1	ಹದ್ನಾಳ ಇಂದ ಪಿ. ಬಿ. ರಸ್ತೆಗೆ ಸೇರ್ಪಡೆ ಅಪ್ಪಚ್ಚಿವಾಡಿ ಮೂಲಕ	ಇತರ ಜಿಲ್ಲಾ ರಸ್ತೆ	6.00 ಕಿ.ಮೀ.
2	ಶಿರಗುಪ್ಪಿ ಶೆಂದೂರು ರಸ್ತೆ ಗೊಂಡಿಕೊಪ್ಪ ಮೂಲಕ ಸಿ. ಡಿ. ಕಾಮಗಾರಿಗಳು.	ಪಳ್ಳಿ ರಸ್ತೆ	2. ಸಿ.ಡಿ.

1	2	3	4
3	ಶಿರಗುಪ್ಪಿ ಕೆಂದೂರು ರಸ್ತೆ ಗೊಂಡಿಕೊಪ್ಪ ಮೂಲಕ	ಹಳ್ಳಿ ರಸ್ತೆ	4.00ಕಿ.ಮೀ.
4	ಪಿ. ಬಿ. ರಸ್ತೆಯಿಂದ ಆದಿ ಜೈನವಾಡಿ ಸಿದ್ನಾಳ್ ಹುನ್ನರ್ಗಿ ರಸ್ತೆ.	,,	6.00ಕಿ.ಮೀ.
5	ಪಿ. ಬಿ. ರಸ್ತೆಯಿಂದ ಆದಿ ಜೈನವಾಡಿ ಸಿದ್ನಾಳ್ ಹರ್ಣರ್ಗಿ ರಸ್ತೆ ಸಿ. ಡಿ. ಕಾಮಗಾರಿಗಳು	,,	4. ಸಿ. ಡಿ.
6	ರಾಂಪುರ ಅಪ್ರೋಚ್ ರಸ್ತೆ	,,	4.00ಕಿ.ಮೀ.
7	ಪಂಗೇರಿ (ಎ) ಅಪ್ರೋಚ್ ರಸ್ತೆ	,,	3.00ಕಿ.ಮೀ.
8	ಪಂಗೇರಿ (ಎ) ಅಪ್ರೋಚ್ ರಸ್ತೆ ಸಿ.ಡಿ. ಕಾಮಗಾರಿಗಳು	,,	2. ಸಿ. ಡಿ.
9	ಲಕಾನ್‌ಪುರ ಪಡಲಿಹಾಳ ರಸ್ತೆ	,,	3.00ಕಿ.ಮೀ.
			26.00ಕಿ.ಮೀ. 8 ಸಿ.ಡಿ.

ವಿಷಯ :– ಕರ್ನಾಟಕದಲ್ಲಿನ ಕರಾವಳಿ ಪ್ರದೇಶ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 531 (829)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಕರ್ನಾಟಕದಲ್ಲಿನ ಕರಾವಳಿ ಪ್ರದೇಶ ಕೊರೆತ ತಡೆಗಟ್ಟಲು, ಕೇಂದ್ರ ಸರ್ಕಾರವು ನಿರ್ದಿಷ್ಟವಾದ ಹಾಗೂ ವಿವರವಾದ ವರದಿ ಸಲ್ಲಿಸಲು ರಾಜ್ಯ ಸರ್ಕಾರವನ್ನು ಕೇಳಿರುವುದೆ ?

ಆ) ಹಾಗಿದ್ದಲ್ಲಿ ಅದನ್ನು ತಯಾರು ಮಾಡಿ ಕಳುಹಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ, ಯಾವಾಗ ಕಳುಹಿಸಲಾಗುವುದು ?

ಉ) ಉದ್ದೇಶಿಸಿದ ಯೋಜನೆ ಮೇಲೆ ವ್ಯಯ ಮಾಡಬೇಕಾದ ಒಟ್ಟಾರೆ ಮೊಬಲಗು ಎಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 1982 ನೇ ಸಾಲಿನಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯವು ಸಲ್ಲಿಸಿದ್ದ "ಕರ್ನಾಟಕ ಕರಾವಳಿ ಕೊರೆತ ತಡೆಗಟ್ಟುವ ಸಮಗ್ರ ಯೋಜನೆ" ಬಗ್ಗೆ ಕೇಂದ್ರ ಜಲ ಆಯೋಗವು ಅಂಶಗಳನ್ನು ಗಮನಿಸಿ ಪರಿಷ್ಕರಿಸಲು ಸಲಹೆ ಮಾಡಿದೆ.

ಆ) 1985 ನೇ ಸಾಲಿನಲ್ಲಿ 150 ಕೋಟಿ ರೂ.ಗಳ ಸಮಗ್ರ ಯೋಜನೆ ಹಾಗೂ 1989ನೇ ಆಗಸ್ಟ್ ಮಾಹೆಯಲ್ಲಿ ಪರಿಷ್ಕರಿಸಿದ 145 ಕೋಟಿ ರೂ.ಗಳ ಸಮಗ್ರ ಯೋಜನೆಯನ್ನು ಕೇಂದ್ರ ಜಲ ಆಯೋಗಕ್ಕೆ ಬಿಡುಗಡೆ ಕೋರಿ ಕಳುಹಿಸಲಾಗಿದೆ.

ಇ) "ಆ" ಪ್ರಶ್ನೆಯ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) 145 ಕೋಟಿ ರೂ. ಗಳು.

Sub :— ABOLITION OF POST OF EXECUTIVE DIRECTOR AT MYSORE PAPER MILLS LTD.

Un starred L. A. Qn. No. 532 (684)

Sri C. Byregowda (Vemagal) :– Will be Chief Minister be Please to state ?

1) When the post of Executive Director in Mysore Paper Mills was abolished and the reason for the same ?